# ಆಹಾ ಸುದ್ದಿ!

★ ಸಸಿತೋಟ



ಫ್ಲಾರಿಡಾದಲ್ಲಿ ಇತ್ತೀಚೆಗೆ ನಡೆದ 'ದಿರಿಸು ಹಾಗೂ ಮುಖವಾಡ' ಹಬ್ಬದಲ್ಲಿ ಏರ್ಪಡಿಸಿದ್ದ ಸ್ಪರ್ಧೆಯ ಒಂದು ಝಲಕ್. ತಾನು ಸಾಕಿದ ನಾಯಿಯ ಮುಖವನ್ನೇ ಹೋಲುವ ಅದರ ಒಡೆಯನಿಗೆ ಬಹುಮಾನವಂತೆ. 'ನಾಯಿ ಮುಸುಡಿನವ' ಎಂದು ಬೈದರೂ 'ಅದು ಯಾವ ನಾಯಿ?' ಎಂದು ಅದನ್ನು ಹುಡುಕಿಕೊಂಡು ಓಡುವ ಕಾಲ ಬಂತಲ್ಲಪ್ಪ!

ಟೆಕ್ಸಾಸ್‌ನ 19ರ ಹರೆಯದ ವಿದ್ಯಾರ್ಥಿನಿಯೊಬ್ಬಳು ತನ್ನ ಕಾರನ್ನು ನಿಲ್ಲಿಸಿದ್ದ ಪೊಲೀಸ್ ಕಾರಿಗೆ ಡಿಕ್ಕಿ ಹೊಡೆಸಿದಳಂತೆ. ಅಷ್ಟೇ ಆಗಿದ್ದರೆ ದಂಡ ಹಾಕಿ ಬಿಡುತ್ತಿದ್ದರೇನೋ. ಆದರೆ ಆಕೆ ಚಾಲನೆ ಮಾಡುತ್ತಲೇ ಸೆಲ್ಫಿ ತೆಗೆಯುತ್ತಿದ್ದಳಂತೆ. ಅಷ್ಟೇ ಆಗಿದ್ದರೆ ಸ್ವಲ್ಪ ಹೆಚ್ಚು ದಂಡ ಹಾಕಿ ಹೋಗಲಿ ಎಂದು ಬಿಟ್ಟುಬಿಡುತ್ತಿದ್ದರೇನೋ. ಆದರೆ ಆಕೆಯ ಬಳಿ ಅರ್ಧ ಕುಡಿದ ವೈನ್ ಬಾಟಲ್ ಇತ್ತಂತೆ. ಸರಿ ಹರೆಯದ ಹುಚ್ಚು ಎಂದುಕೊಂಡು ಬಿಡುತ್ತಿದ್ದರೇನೋ. ಆದರೆ ನಗ್ನಳಾಗಿ ಸೆಲ್ಫಿ ತೆಗೆದು ಗೆಳೆಯನಿಗೆ ಸ್ನ್ಯಾಪ್‌ಚ್ಯಾಟ್‌ನಲ್ಲಿ ಕಳುಹಿಸುತ್ತಿದ್ದಳಂತೆ. ಇದೀಗ ಅದೇ ಫೋಟೊ ಪೊಲೀಸ್ ಬುಕಿಂಗ್ ಬುಕ್ ಸೇರಿಕೊಂಡು ಫಜೀತಿ ಹುಟ್ಟಿಸಿದೆಯಂತೆ.



ಲಿಥುವಾನಿಯಾದ ವ್ಯಕ್ತಿಯೊಬ್ಬ ತನ್ನ ಬೋಗುಣಿಗಳ ಮೇಲಿನ ಪ್ರೀತಿಯನ್ನು ಛಾವಣಿ ಮೇಲೆ ತಂದಿದ್ದಾನೆ. ಆದರೆ ಸಂಗ್ರಹಿಸಿದ ಬೋಗುಣಿಗಳನ್ನು ಛಾವಣಿ ಮೇಲೆ ಪ್ರದರ್ಶಿಸಿದ್ದು ಮಾತ್ರ ಹೆಂಡತಿಯ ಸಿಟ್ಟಿನ ಕೈಗೆ ಬೋಗುಣಿ ಸಿಗದಂತೆ ತಲೆ ಬಚಾವ್ ಮಾಡಿಕೊಳ್ಳುವ ಉದ್ದೇಶವಿರಬಹುದು.



ಚೀನಾದ ಈ ಮಹಾನ್ ಭವಿಷ್ಯಕಾರ ಅಮೆರಿಕದ ಮುಂದಿನ ಅಧ್ಯಕ್ಷ ಯಾರು ಎಂದು ಭವಿಷ್ಯ ನುಡಿದಿದೆಯಂತೆ. ಚಾನೆಲ್‌ಗಳ ಜ್ಯೋತಿಷಿಗಳಿಗಿಂತ ಒಂದು ಹೆಜ್ಜೆ ಮುಂದೇ ಇದೆ ಈ ಆದಿಮಾನವ.

ಚೀನಾದ 60ರ ಹರೆಯದ ಈ ವೃದ್ಧೆಯ ಕೂದಲಿನ ಉದ್ದ ಬರೋಬ್ಬರಿ 11 ಅಡಿ. ಕಳೆದ 18 ವರ್ಷಗಳಿಂದ ಕೂದಲನ್ನು ಕತ್ತರಿಸದೇ ಬೆಳೆಸುತ್ತಿರುವ ಆಕೆ ಇಷ್ಟೆಲ್ಲಾ ಕಷ್ಟಪಟ್ಟಿದ್ದು ಗಿನ್ನೆಸ್ ದಾಖಲೆಗೋಸ್ಕರ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ದಾಖಲೆ ಇನ್ನೂ 5.54 ಇಂಚು ದೂರವಿದ್ದು, ಇದರಲ್ಲಿ ಗಂಡನ ಸಹಕಾರ ಅಪಾರವಂತೆ. ಅನ್ನದಲ್ಲಿ ದೊರೆತ ಕೂದಲನ್ನೂ ನಯವಾಗೇ ಎತ್ತಿಟ್ಟು ಸಹಕಾರ ನೀಡಿರಬಹುದು.



ಚೀನಾದ ಶಾಣ್ಯಾ ಹೆಣ್ಮಗಳೊಬ್ಬಳು ಮನೆ ಖರೀದಿಸಲು 18 ಸಾವಿರ ಡಾಲರ್ ಠೇವಣಿಯಾಗಿಟ್ಟಿದ್ದಾಳಂತೆ. ಆದರೆ ಆ ಹಣ ಬಂದಿದ್ದು ಎಲ್ಲಿಂದ ಎಂದು ಪತ್ತೆ ಹಚ್ಚಿದ ಈ ಶಿಯೋಲಿ ಎಂಬಾಕೆಯ ಸ್ನೇಹಿತೆ ಸಾಮಾಜಿಕ ಜಾಲತಾಣದಲ್ಲಿ ನೀಡಿದ ವಿವರದಿಂದಾಗಿ ದಂಗು ಬಡಿದು ಹೋದರಂತೆ ಆಕೆಯ 20 ಮಂದಿ ಗೆಳೆಯರು. 20 ಹುಡುಗರ ಸ್ನೇಹ ಬೆಳೆಸಿ ಪ್ರತಿಯೊಬ್ಬರಿಂದಲೂ ಐಫೋನ್ 7 ಅನ್ನು ಉಡುಗೊರೆ ಪಡೆದಿದ್ದಳಂತೆ. ಅವನ್ನೆಲ್ಲ ಮಾರಿ ಆ ಹಣದಿಂದ ಮನೆ ಖರೀದಿಗೆ ಹೊರಟಿದ್ದಾಳಂತೆ. ಹಣ ಗಳಿಸುವುದು ಹೇಗೆ? ಪುಸ್ತಕದಲ್ಲಿ ಸೇರ್ಪಡೆ ಮಾಡಬಹುದು ಈ ಐಡಿಯಾವನ್ನು.